# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 62/2025

ಪಿಡಬ್ಲ್ಯೂ: 08
ಸಿಡಬ್ಲ್ಯೂ: 11

**ದಿನಾಂಕಃ 25-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ರಾಜಶೇಖರ್ |
| ತಂದೆಯ ಹೆಸರು | : ಹನುಮಂತಪ್ಪ |
| ವಯಸ್ಸು | : 32 ವರ್ಷ |
| ಉದ್ಯೋಗ | : ಗಾರೆ ಕೆಲಸ |
| ವಾಸ ಸ್ಥಳ | : ಮೊಳಕಾಲ್ಮೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಮ್ಮ ಮನೆಗೂ ಮತ್ತು ಪ್ರಾಸಾ–**1** / ಲಕ್ಷ್ಮಿರವರ ಮನೆಗೂ ಸುಮಾರು ಅರ್ಧ ಕಿಮೀಗಳ ಅಂತರ, ಆದರೆ ನಮ್ಮಿಬ್ಬರ ಮನೆಗಳು ಒಂದೇ ಬಡಾವಣೆಯಲ್ಲಿ ಬರುತ್ತವೆ. ಆರೋಪಿ ಹಾಗೂ ಪ್ರಾಸಾ–**7** ರವರ ಪರಿಚಯ ಇದೆ. ಅದೇ ರೀತಿ ಮೃತ ಚಂದ್ರುಶೇಖರನನ್ನು ನೋಡಿದ್ದೆ. ಈಗ **3–4** ವರ್ಷಗಳ ಹಿಂದೆ ಚಂದ್ರುಶೇಖರ್ ತೀರಿಕೊಂಡ, ಆದರೆ ಆತ ಹೇಗೆ ತೀರಿಕೊಂಡಿದ್ದಾನೆಂದು ತನಿಖಾಧಿಕಾರಿಗೆ ಹೇಳಿಕೆ ನೀಡಿಲ್ಲ. ಕೇವಲ ನನ್ನ ಸಹಿ ಬೇಕೆಂದು ಹೇಳಿ ತನಿಖಾಧಿಕಾರಿ ನನ್ನ ಸಹಿಯನ್ನು ತೆಗೆದುಕೊಂಡಿದ್ದಾರೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

**2.** ನಾನು ಮನೆಯಲ್ಲಿದ್ದಾಗ ದಿನಾಂಕ **14–10–2023** ರಂದು ರಾತ್ರಿ **8.00** ಗಂಟೆಗೆ ಆರೋಪಿತನ ಮನೆಯಿಂದ ಜೋರಾಗಿ ಅಳುವ ಶಬ್ದ ಕೇಳಿದ್ದು ತಕ್ಷಣವೇ ನಾನು ಹಾಗೂ ಇತರರು ಅಲ್ಲಿಗೆ ಹೋಗಿದ್ದು ಅವರ ಮನೆ ಮುಂದಿನ ಬಾಗಿಲಿನಲ್ಲಿ ಚಂದ್ರುಶೇಖರ್ ಈತನ ಕುತ್ತಿಗೆಗೆ ಪೆಟ್ಟಾಗಿ ಆತನ ಕತ್ತಿನಿಂದ ರಕ್ತ ಸೋರುತ್ತಿತ್ತು ಕೂಡಲೇ ನಾನು ಹಾಗೂ ಇತರರು ಉಪಚರಿಸಿದೆವು ಮತ್ತು ಆತನ ಗಾಯದ ಬಗ್ಗೆ ಪ್ರಾಸಾ–**1** ರವರನ್ನು ಕೇಳಲಾಗಿ ಆಕೆ ಟಿವಿಯ ರಿಮೋಟ್ ವಿಷಯವಾಗಿ ತನ್ನ ಇಬ್ಬರೂ ಮಕ್ಕಳು ಗಲಾಟೆ ಮಾಡುತ್ತಿದ್ದ ಕಾರಣ ಆರೋಪಿ ಕೋಪದಿಂದ ಮಷಿನ್ ಮೇಲಿದ್ದಂತಹ ಕತ್ತರಿಯನ್ನು ಚಂದ್ರುಶೇಖರನ ಬಳಿ ಜೋರಾಗಿ ಎಸೆದಿದ್ದು ಅದು ಆತನ ಕುತ್ತಿಗೆಗೆ ಸಿಕ್ಕಿಕೊಂಡು ಆತನಿಗೆ ತೀರ್ವ ಸ್ವರೂಪದ ರಕ್ತಗಾಯವಾಗಿದೆ ಎಂದು ನಮಗೆ ತಿಳಿಸಿದಳು ಎನ್ನುವುದು ಸರಿಯಲ್ಲ. ನಂತರ ನಾನು ಹಾಗೂ ಇತರರು ಚಂದ್ರುಶೇಖರನನ್ನು ಒಂದು ವಾಹನದಲ್ಲಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎನ್ನುವುದು

ಸರಿಯಲ್ಲ. ತನಿಖಾಧಿಕಾರಿಗೆ ಈ ಮೇಲೆ ಸೂಚಿಸಿದಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಹೇಳಿಕೆಯ ಸಂಬಂಧಿಸಿದ ಭಾಗವನ್ನು ನಿಪಿ–9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಡಿ.ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿಃ**

ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 62/2025

ಪಿಡಬ್ಲ್ಯೂ: 07
ಸಿಡಬ್ಲ್ಯೂ: 10

**ದಿನಾಂಕ: 25-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ತಿಪ್ಪೇಸ್ವಾಮಿ |
| ತಂದೆಯ ಹೆಸರು | : ನಾಗರಾಜ |
| ವಯಸ್ಸು | : 38 ವರ್ಷ |
| ಉದ್ಯೋಗ | : ವ್ಯಾಪಾರ |
| ವಾಸ ಸ್ಥಳ | : ಮೊಳಕಾಲ್ಮೂರು |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

ಫ್ರಾಸಾ–**1** / ಲಕ್ಷ್ಮಿ ಹಾಗೂ ಚಾಸಾ–**11** / ರಾಜಶೇಖರ್ ಗೊತ್ತು. ನಮ್ಮ ಮನೆ ಮತ್ತು ಲಕ್ಷ್ಮಿಯವರ ಮನೆ ಮದ್ಯೆ ಸುಮಾರು **20** ಮನೆಗಳು ಬರುತ್ತವೆ. ಮೃತ ಚಂದ್ರುಶೇಖರನನ್ನು ನೋಡಿದ್ದೆ. ಸದರಿ ಚಂದ್ರುಶೇಖರ್ ಯಾವ ರೀತಿ ತೀರಿಕೊಂಡಿದ್ದಾನೆಂದು ಗೊತ್ತಿಲ್ಲ. ತನಿಖಾಧಿಕಾರಿಗೆ ಆತನ ಸಾವಿನ ಕುರಿತು ಹೇಳಿಕೆ ಕೊಟ್ಟಿಲ್ಲ. ಕೇವಲ ನನ್ನ ಸಹಿ ಬೇಕೆಂದು ಹೇಳಿ ಅವರು ಅದನ್ನು ಪಡೆದರು. ಚಂದ್ರುಶೇಖರನನ್ನು ನಾನು ಮೊಳಕಾಲ್ಲೂರಿನ ಆಸ್ಪತ್ರೆಯಲ್ಲಿ ನೋಡಿದ್ದೇನೆ. ಆಗ ಆತನ ಕುತ್ತಿಗೆಗೆ ಗಾಯವಾಗಿತ್ತು.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

**2.** ದಿನಾಂಕ **14–10–2023** ರಂದು ರಾತ್ರಿ **8.00** ಗಂಟೆಗೆ ನಾನು ಮನೆಯಲ್ಲಿದ್ದಾಗ ಆರೋಪಿತನ ಮನೆಯಲ್ಲಿ ಗಲಾಟೆಯಾಗುತ್ತಿದ್ದ ಶಬ್ದ ಕೇಳಿ ತಕ್ಷಣವೇ ನಾನು ಅಲ್ಲಿಗೆ ಹೋಗಿದ್ದು ಅವರ ಮನೆ ಮುಂದಿನ ಬಾಗಿಲಿನಲ್ಲಿ ಚಂದ್ರುಶೇಖರ್ ಕುತ್ತಿಗೆಗೆ ಪೆಟ್ಟು ಮಾಡಿಕೊಂಡು ಬಿದ್ದಿದ್ದ ಮತ್ತು ಆತನ ಕತ್ತಿನಿಂದ ರಕ್ತ ಸೋರುತ್ತಿತ್ತು ಕೂಡಲೇ ನಾನು ಹಾಗೂ ಇತರರು ಆತನನ್ನು ಉಪಚರಿಸಿದೆವು ಮತ್ತು ಆತನ ಗಾಯದ ಬಗ್ಗೆ ವಿಚಾರಿಸಲಾಗಿ ಫ್ರಾಸಾ–**1** ಟಿವಿಯ ರಿಮೋಟ್ ವಿಷಯವಾಗಿ ಮಕ್ಕಳು ಗಲಾಟೆ ಮಾಡುತ್ತಿದ್ದ ಕಾಲಕ್ಕೆ ಆರೋಪಿ ಕೋಪದಿಂದ ಕತ್ತರಿಯನ್ನು ಚಂದ್ರುಶೇಖರನ ಬಳಿ ಜೋರಾಗಿ ಬೀಸಿದ್ದು ಅದು ಆತನ ಕುತ್ತಿಗೆಗೆ ಸಿಕ್ಕಿಕೊಂಡು ರಕ್ತಗಾಯವಾಗಿದೆ ಎಂದು ನಮಗೆ ತಿಳಿಸಿದಳು ಎನ್ನುವುದು ಸರಿಯಲ್ಲ. ನಂತರ ನಾನು ಹಾಗೂ ಇತರರು ಚಂದ್ರುಶೇಖರನನ್ನು ಒಂದು ವಾಹನದಲ್ಲಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎನ್ನುವುದು ನಿಜ. ನಾನು ಚಂದ್ರುಶೇಖರನನ್ನು ಮೊದಲ ಬಾರಿಗೆ ಅಂಬುಲೆನ್ಸಿನಲ್ಲಿ ನೋಡಿದೆ ಎಂದು

ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ತನಿಖಾಧಿಕಾರಿಗೆ ಈ ಮೇಲೆ ಸೂಚಿಸಿದಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–**8** ಎಂದು ಗುರುತಿಸಲಾಯಿತು. ಆರೋಪಿ ನನಗೆ ಪರಿಚಯವಿರುವ ಕಾರಣ ಆತನಿಗೆ ತೊಂದರೆಯಾಗಬಾರದು ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀ ಡಿ.ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿಃ**

ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 62/2025

ಪಿಡಬ್ಲ್ಯೂ: 06
ಸಿಡಬ್ಲ್ಯೂ: 08

**ದಿನಾಂಕಃ 25-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | ಃ ತಿಪ್ಪೇಸ್ವಾಮಿ |
| ತಂದೆಯ ಹೆಸರು | ಃ ಕೆಂಗಪ್ಪ |
| ವಯಸ್ಸು | ಃ 53 ವರ್ಷ |
| ಉದ್ಯೋಗ | ಃ ನೇಕಾರಿಕೆ |
| ವಾಸ ಸ್ಥಳ | ಃ ಮೊಳಕಾಲ್ಮೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನನ್ನ ಮನೆ ಮೊಳಕಾಲ್ಮೂರಿನಲ್ಲಿ ಬೋವಿ ಕಾಲೋನಿಯಲ್ಲಿ ಬರುತ್ತಿದ್ದು ಆರೋಪಿತನ ಎನ್.ಎಂ.ಎಸ್ ಬಡಾವಣೆಯಲ್ಲಿ ಬರುತ್ತದೆ. ಕಾರಣ ನನ್ನ ಮತ್ತು ಆರೋಪಿತನ ಮನೆಗಳ ಮದ್ಯೆ ಸುಮಾರು ಮುಕ್ಕಾಲು ಕಿಮೀ ಅಂತರವಾಗುತ್ತದೆ. ಬೋವಿ ಕಾಲೋನಿಯ ಹನುಮಂತಪ್ಪನ ಮಗ ತಿಪ್ಪೇಸ್ವಾಮಿ, ಪರಮೇಶ್ವರಪ್ಪನ ಮಗ ಮಹೇಶ ಹಾಗೂ ಬೊಮ್ಮಶಂಕರನ ಮಗ ಶಿವಮೂರ್ತಿ ಅಂದರೆ ಚಾಸಾ–4 ರಿಂದ 6 ಇವರ ಗುರುತು ಇದೆ. ಆರೋಪಿತನ ಮಗ ಚಂದ್ರುಶೇಖರ್ ಹೇಗೆ ತೀರಿಕೊಂಡಿದ್ದಾನೆಂದು ಗೊತ್ತಿಲ್ಲ. ಆದರೆ ಶವ ಪಂಚನಾಮೆ ಕಾಲಕ್ಕೆ ನಾನು ಹೋಗಿದ್ದೆ. ಆತನ ಸಾವಿನ ಕುರಿತು ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿಲ್ಲ. ಆ ಶವಕ್ಕೆ ಆದಂತಹ ಗಾಯವನ್ನು ನಾನು ಗಮನಿಸಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

**2**. ಶವ ಪಂಚನಾಮೆ ಕಾಲಕ್ಕೆ ಆರೋಪಿ ಕತ್ತರಿಯನ್ನು ಜೋರಾಗಿ ತನ್ನ ಮಗನಾದ ಚಂದ್ರುಶೇಖರನ ಬಳಿ ಎಸೆದಿದ್ದರಿಂದ ಅದು ಆತನ ಕುತ್ತಿಗೆಗೆ ಸಿಕ್ಕಿಕೊಂಡು ಆತ ತೀರಿಕೊಂಡಿದ್ದಾನೆಂದು ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಮತ್ತು ನಾನು ಒಂದೇ ಊರಿನವರಾದ ಕಾರಣ ಆತನಿಗೆ ಸಹಾಯ ಮಾಡಲು ಘಟನೆಯ ಬಗ್ಗೆ ಮಾಹಿತಿ ಇದ್ದಾಗ್ಯೂ ಚಂದ್ರುಶೇಖರನ ಸಾವಿನ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ತನಿಖಾಧಿಕಾರಿಗೆ ಈ ಮೇಲೆ ಸೂಚಿಸಿದಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–7 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಡಿ.ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿಃ**

ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 62/2025

ಪಿಡಬ್ಲ್ಯೂ: 05
ಸಿಡಬ್ಲ್ಯೂ: 07

**ದಿನಾಂಕಃ 25-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಗೋಪಾಲ್ |
| ತಂದೆಯ ಹೆಸರು | : ಪೆದ್ದಣ್ಣ |
| ವಯಸ್ಸು | : 49 ವರ್ಷ |
| ಉದ್ಯೋಗ | : ಗಾರೆ ಕೆಲಸ |
| ವಾಸ ಸ್ಥಳ | : ಮೊಳಕಾಲ್ಮೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಚಾಸಾ–**5** ಹಾಗೂ **6** ಇವರ ಪರಿಚಯ ಇದೆ. ಆದರೆ ತಿಪ್ಪೇಸ್ವಾಮಿ ಎಂಬ ಮೂರು ಜನ ವ್ಯಕ್ತಿಗಳು ಊರಲ್ಲಿ ಇರುವುದರಿಂದ ಚಾಸಾ–**4** ರವರ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಅದೇ ರೀತಿ ಚಾಸಾ–**8** ರವರ ಪರಿಚಯ ಇಲ್ಲ. ಆದರೆ ಆರೋಪಿಯ ಪರಿಚಯ ಇದೆ. ಆರೋಪಿತನ ಮಗ ಚಂದ್ರುಶೇಖರ್ ನೀರಿನ ಮೇಲೆ ಕಾಲಿಟ್ಟು ಅದರಿಂದಾಗಿ ಜಾರಿ ಬಿದ್ದು ಕತ್ತರಿ ಆತನ ಕುತ್ತಿಗೆಯಲ್ಲಿ ಸಿಕ್ಕಿಕೊಂಡು ಆತ ತೀರಿಕೊಂಡಿದ್ದಾನೆಂದು ಗೊತ್ತಾಯಿತು. ಆರೋಪಿತನೇ ತನ್ನ ಮಗನ ಬಳಿ ಆ ಕತ್ತರಿಯನ್ನು ಎಸೆದು ಆತನ ಮರಣಕ್ಕೆ ಕಾರಣನಾಗಿದ್ದಾನೆಂದು ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

**2.** ದಿನಾಂಕ **15–10–2023** ರಂದು ಮೊಳಕಾಲ್ಮೂರು ಸರ್ಕಾರಿ ಆಸ್ಪತ್ರೆಯ ಶವಾಗಾರದ ಕೊಠಡಿಯಲ್ಲಿ ಚಂದ್ರುಶೇಖರನ ಶವದ ಶವ ಪಂಚನಾಮೆ ಕಾಲಕ್ಕೆ ನಾನು ಹಾಜರಿದ್ದು ಸದರಿ ಶವಕ್ಕೆ ಆದಂತಹ ಗಾಯಗಳನ್ನು ಪರಿಶೀಲಿಸಿ ಸದರಿ ಗಾಯ ಈಗ ನ್ಯಾಯಾಲಯದ ಮುಂದಿರುವ ಆರೋಪಿ ಕತ್ತರಿಯನ್ನು ತನ್ನ ಮಗನ ಬಳಿ ಜೋರಾಗಿ ಬೀಸಿದ್ದರಿಂದ ಅದು ಆತನ ಕತ್ತಿಗೆ ಸಿಕ್ಕಿಕೊಂಡು ಆತ ತೀರಿಕೊಂಡ ಎಂದು ತನಿಖಾಧಿಕಾರಿಗೆ ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಹೇಳಿಕೆಗೆ ಸಂಬಂಧಿಸಿದ ಭಾಗವನ್ನು ನಿಪಿ–**6** ಎಂದು ಗುರುತಿಸಲಾಯಿತು.

**3**. ಆರೋಪಿ ಮತ್ತು ನಾನು ಒಂದೇ ಊರಿನವರಾದ ಕಾರಣ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ತನಿಖಾಧಿಕಾರಿಗೆ ಈ ಮೇಲೆ ಸೂಚಿಸಿದಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀ ಡಿ.ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿಃ**

ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.